ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
1951ರ ರಾಜ್ಯ ಹಣಕಾಸು ಸಂಸ್ಥೆಗಳ ಕಾಯಿದೆ ಅನ್ವಯ ಸ್ಥಾಪಿತ
KARNATAKA STATE FINANCIAL CORPORATION
Established under the State Financial Corporations' Act, 1951
भारतीय मानक ब्यूरो IS / ISO 9001 : 2008
मानक पथप्रदर्शक BUREAU OF INDIAN STANDARDS QMS

ಸಂಖ್ಯೆ : ಕ.ರಾ.ಹ.ಸಂ./ಪ್ರ.ಕ./ ಸಿಬ್ಬಂದಿ/೯೧೯
Ref. No. KSFC/H.O./

ದಿನಾಂಕ :
Date........13/11/2015.......

## <u>ಸುತ್ತೋಲೆ</u>

ವಿಷಯ: ಚಲನವೈಕಲ್ಯ ಹೊಂದಿರುವ ಮಕ್ಕಳಿರುವ ಉದ್ಯೋಗಿಗಳಿಗೆ
ಪೋಷಣಾ ಭತ್ಯೆಯ ಸೌಲಭ್ಯವನ್ನು ನೀಡುವ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ಚಲನವೈಕಲ್ಯತೆ ಮತ್ತು ಅಂಗವಿಕಲತೆಯಿಂದಾಗಿ ಮನೆಯಲ್ಲಿಯೇ ಉಳಿದುಕೊಳ್ಳುವ ಹಾಗು ಶಾಲೆಗಳಿಗೆ ಹೋಗಲು ಅಸಮರ್ಥರಾಗಿ ಪೋಷಕರ ಮೇಲೆ ಸಂಪೂರ್ಣವಾಗಿ ಅವಲಂಬಿತರಾಗಿರುವ ಸಂಸ್ಥೆಯ ಉದ್ಯೋಗಿಗಳ ಮಕ್ಕಳ ಪಾಲನೆ/ಪೋಷಣೆ ಮಾಡುವುದಕ್ಕಾಗಿ ಒಂದು ಮಗುವಿಗೆ ಮಾಸಿಕ ತಲಾ ರೂ.500/-ಗಳ ದರದಲ್ಲಿ ಗರಿಷ್ಠ ಎರಡು ಮಕ್ಕಳಿಗೆ ಮಾತ್ರ ಪೋಷಣಾ ಭತ್ಯೆಯನ್ನು (ವೈಯಕ್ತಿಕ ವೇತನ) ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ವೇತನದಲ್ಲಿ ಸೇರಿಸಿ ನೀಡಲು ದಿನಾಂಕ 05.11.2015 ರಂದು ನಡೆದ ಸಂಸ್ಥೆಯ ನಿರ್ದೇಶಕ ಮಂಡಳಿಯ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ.

1. ಅಂಗವಿಕಲ ಪೋಷಣಾ ಭತ್ಯೆಯು ಸಂಸ್ಥೆಯ ಉದ್ಯೋಗಿಗಳ ಶಾಶ್ವತ ಅಂಗವಿಕಲ ಮಕ್ಕಳಿಗೆ ಮಾತ್ರ ಲಭ್ಯವಾಗುತ್ತದೆ.
2. ಸಂಸ್ಥೆಯ ಉದ್ಯೋಗಿಗಳ ಮಕ್ಕಳು ಅಂಗವಿಕಲತೆಯಿಂದಾಗಿ ಶಾಶ್ವತವಾಗಿ ಶಾಲೆಗೆ ಹೋಗಲು ಅಸಮರ್ಥರಾಗಿರುವ ಬಗ್ಗೆ ವೈದ್ಯಕೀಯ ಮಂಡಳಿಯಿಂದ ಪ್ರಮಾಣ ಪತ್ರವನ್ನು ಪಡೆದು ತಮ್ಮ ಮೇಲಧಿಕಾರಿಗಳ ಮೂಲಕ ಸಿಬ್ಬಂದಿ ವಿಭಾಗಕ್ಕೆ ಕೋರಿಕೆ ಸಲ್ಲಿಸತಕ್ಕದ್ದು. ಈ ಪ್ರಮಾಣ ಪತ್ರವನ್ನು ಪರಿಶೀಲಿಸಿ ಭತ್ಯೆಯನ್ನು ಮಂಜೂರು ಮಾಡುವ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು.
3. ಸಂಸ್ಥೆಯ ಉದ್ಯೋಗಿಗಳ ಮಕ್ಕಳು ಸಂಪೂರ್ಣವಾಗಿ ಅವರ ಮೇಲೆ ಅವಲಂಬಿತರಾಗಿರುವ ಬಗ್ಗೆ ಉದ್ಯೋಗಿಯು ನೀಡುವ ಘೋಷಣೆಯ ಆಧಾರದ ಮೇಲೆ ಈ ಸೌಲಭವನ್ನು ನೀಡಲಾಗುವುದು ಹಾಗು ಈ ಸೌಲಭ್ಯವನ್ನು ಪಡೆಯಲು ಮಕ್ಕಳು 6 ವರ್ಷ ಪೂರ್ಣಗೊಳಿಸಿರುವ ಬಗ್ಗೆ ವಯಸ್ಸಿನ ದೃಢೀಕರಣ ಪತ್ರ/ಹುಟ್ಟಿದ ದಿನಾಂಕದ ಪ್ರಮಾಣ ಪತ್ರವನ್ನು ಸಂಸ್ಥೆಗೆ ಸಲ್ಲಿಸಬೇಕು.
4. ಸಂಸ್ಥೆಯ ಉದ್ಯೋಗಿಗಳ ಅಂಗವಿಕಲತೆ ಹೊಂದಿರುವ ಮಕ್ಕಳು ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ಯಾವುದೇ ಪೋಷಣಾ ಭತ್ಯೆ / ಇತರೆ ಸೌಲಭ್ಯಗಳನ್ನು ಪಡೆಯುತ್ತಿದ್ದಲ್ಲಿ, ಈ ಸೌಲಭ್ಯ ಪಡೆಯಲು ಅರ್ಹರಿರುವುದಿಲ್ಲ.
5. ಅಂಗವಿಕಲ ಮಕ್ಕಳ ತಂದೆ ಮತ್ತು ತಾಯಿ ಇಬ್ಬರೂ ಸಂಸ್ಥೆ ಉದ್ಯೋಗಿ/ಸರ್ಕಾರಿ ನೌಕರರಾಗಿದ್ದಲ್ಲಿ ಒಬ್ಬರು ಮಾತ್ರ ಪೋಷಣಾ ಭತ್ಯೆ ಪಡೆಯಲು ಅರ್ಹರಾಗಿರುತ್ತಾರೆ.
6. ಈ ಪೋಷಣಾ ಭತ್ಯೆಯನ್ನು ಅಂಗವಿಕಲ ಮಕ್ಕಳ ಜೀವಿತ ಅವಧಿಯವರೆಗೆ ಅಥವಾ ಉದ್ಯೋಗಿಯು ಸಂಸ್ಥೆ/ಸರ್ಕಾರದ ಸೇವೆಯಿಂದ ನಿವೃತ್ತರಾಗುವವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ ನೀಡಲಾಗುವುದು.

ಈ ಪೋಷಣಾ ಭತ್ಯೆ ಸೌಲಭ್ಯವು ನವೆಂಬರ್ 2015 ರಿಂದ ಜಾರಿಗೆ ಬರುತ್ತದೆ.

(ಸಹಿ)
ಕಾರ್ಯ ನಿರ್ವಾಹಕ ನಿರ್ದೇಶಕರು-1

ಗೆ:
ಎಲ್ಲಾ ಶಾಖಾ/ಆ.ಲೆ.ಪ ಕಛೇರಿಯ ಮುಖ್ಯಸ್ಥರುಗಳಿಗೆ
ಪ್ರಧಾನ ಕಛೇರಿಯ ಎಲ್ಲಾ ವಿಭಾಗಗಳ ಮುಖ್ಯಸ್ಥರುಗಳಿಗೆ

ಎಲ್ಲಾ ಪ್ರಧಾನ ವ್ಯವಸ್ಥಾಪಕರುಗಳಿಗೆ
ಕಾರ್ಯ ನಿರ್ವಾಹಕ ನಿರ್ದೇಶಕರು-2 - ಮಾಹಿತಿಗಾಗಿ

ಅಧ್ಯಕ್ಷರು ಮತ್ತು ವ್ಯಾ.ನಿ. ರವರ ಕಛೇರಿಗೆ - ಮಾಹಿತಿಗಾಗಿ

ಅಧ್ಯಕ್ಷರು, ಕರಾಹಸಂ ನೌಕರರ/ಅಧಿಕಾರಿಗಳ/ಪ.ಜಾ & ಪ.ಪಂ ನೌಕರರ ಸಂಘ, ಪ್ರಧಾನ ಕಛೇರಿ.
ಗ್ರಂಥಾಲಯ / ಸೂಚನಾ ಫಲಕಕ್ಕೆ
ಕಛೇರಿ ಪ್ರತಿ

ಪ್ರಧಾನ ಕಛೇರಿ : ಕೆ.ಎಸ್.ಎಫ್.ಸಿ. ಭವನ, ನಂ. 1/1, ತಿಮ್ಮಯ್ಯ ರಸ್ತೆ, ಕಂಟೋನ್‌ಮೆಂಟ್ ರೈಲ್ವೆ ನಿಲ್ದಾಣದ ಹತ್ತಿರ, ಬೆಂಗಳೂರು-560 052
ದೂರವಾಣಿ ಸಂಖ್ಯೆ ಸಾಮಾನ್ಯ : 22263322 ಫ್ಯಾಕ್ಸ್ : 080-22250126 ಇ-ಮೇಲ್ : info@ksfc.in ವೆಬ್ : www.ksfc.in
HEAD OFFICE : KSFC Bhavan, No. 1/1, Thimmaiah Road, Near Cantonment Railway Station, Bangalore-560 052.
Telephone : Gen : 22263322, Fax : 080-22250126, e-mail : info@ksfc.in Website : www.ksfc.in